ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30,00,00,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು:- ಈಗ ಸದನವು ಮುಂದೂಡಿ ಪುನಃ ಮೂರು ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 1.45 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಮೂರು ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು ಮಧ್ಯಾಹ್ನ 3.10 ಗಂಟೆಗೆ ಪುನಃ ಸಮಾವೇಶಗೊಂಡಿತು.

(ಮಾನ್ಯ ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ಮಾಮನಿರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಪ್ರಶ್ನೋತ್ತರಗಳು.

ಚುಕ್ಕೆ ಗುರುತಿನ ಪ್ರಶ್ನೆಗಳು:

ವಿಷಯ:- ದಾವಣಗೆರೆಯಲ್ಲಿ ಬಸ್ ದುರಸ್ಥಿಯ ಕಾರ್ಯಗಾರ ಸ್ಥಾಪಿಸುವುದು

361 (2275) **ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಾವಣಗೆರೆಯಲ್ಲಿ ಬಸ್ ದುರಸ್ಥಿಯ ಕಾರ್ಯಗಾರ ಮಾಡಲು 5 ಎಕರೆ ಜಮೀನು ತೆಗೆದು ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಸ್ಸುಗಳು ಕೆಟ್ಟರೆ ದುರಸ್ಥಿಗಾಗಿ ಹೊಸಪೇಟೆಗೆ ಅಥವಾ ಶಿವಮೊಗ್ಗಕ್ಕೆ ಹೋಗಬೇಕಾದ ಪರಿಸ್ಥಿತಿ ಇದೆಯೇ?

ಇ) ಹಾಗಿದ್ದಲ್ಲಿ ದಾವಣಗೆರೆಯಲ್ಲಿ ಈ ಕಾರ್ಯಗಾರ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಹೌದು

ಆ) ದಾವಣಗೆರೆಯಲ್ಲಿ ತಾತ್ಕಾಲಿಕವಾಗಿ ವಿಭಾಗ ಕಾರ್ಯಗಾರ ಕಾರ್ಯಾಚರಣೆ ಮಾಡುತ್ತಿದೆ. ಇದರ ಜೊತೆಗೆ ದಾವಣಗೆರೆ ಘಟಕವೂ ಇದೆ. ಆದ್ದರಿಂದ ವಾಹನಗಳನ್ನು ದುರಸ್ಥಿಗಾಗಿ ಹೊಸಪೇಟೆ, ಶಿವಮೊಗ್ಗಕ್ಕೆ ಕಳುಹಿಸುವ ಪ್ರಮೇಯವೇ ಉದ್ಭವಿಸುವುದಿಲ್ಲ.

ಇ) ದಾವಣಗೆರೆಯಲ್ಲಿ ರೂ. 95.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ವಿಭಾಗೀಯ ಕಾರ್ಯಾಗಾರವನ್ನು ನಿರ್ಮಿಸಲು ದಿನಾಂಕ: 18-7-96ರಂದು ಟೆಂಡರುಗಳನ್ನು ಪ್ರಕಟಿಸಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀ ಎಸ್.ಎ. ರವೀಂದ್ರನಾಥ್:- ಮಾನ್ಯ ಉಪಾಧ್ಯಕ್ಷರೆ, ದಾವಣಗೆರೆಯಲ್ಲಿ ಬಸ್ ದುರಸ್ತಿಯ ವ್ಯವಸ್ಥೆ ಇಲ್ಲದಿರುವುದರಿಂದ ಹೊಸಪೇಟೆ ಅಥವಾ ಶಿವಮೊಗ್ಗಕ್ಕೆ ಹೋಗುತ್ತಿವೆ ಎಂದು ಪ್ರಶ್ನೆಯಲ್ಲಿ ಕೇಳಿದ್ದೇನೆ. ಆದರೆ ಅಲ್ಲಿಗೆ ಹೋಗುತ್ತಿಲ್ಲ ಇಲ್ಲೇ ಮಾಡುತ್ತಿದ್ದೇವೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಯಾವುದೇ ಸಂದರ್ಭದಲ್ಲಿ ಆಗಲಿ ನಮ್ಮ ಹಳ್ಳಿಯ ಜನರು ನಮಗೆ ಏತಕ್ಕೆ ಬಸ್ಸುಗಳು ಬರುತ್ತಿಲ್ಲ ಎಂದು ಕೇಳಿದರೆ ರಿಪೇರಿಗೆ ಹೋಗಿವೆ ಎಂದು ಹೇಳುತ್ತಾರೆ. ಆದರೆ ಈ ಬಸ್ಸುಗಳು ಹೊಸಪೇಟೆಗೆ ಹೋಗಿವೆ ಎಂದು ನಮ್ಮ ಜನರು ಸಾಕಷ್ಟು ಸಾರಿ ನಮಗೆ ದೂರುಗಳನ್ನು ಹೇಳುತ್ತಾರೆ. ಇನ್ನು ಮುಂದಾದರೂ ಈ ರೀತಿ ತೊಂದರೆ ಆಗದಂತೆ ಹಳ್ಳಿಗಳಿಗೆ ಹೋಗಬೇಕಾದಂಥ ಬಸ್ಸುಗಳು ಸಮಯಕ್ಕೆ ಸರಿಯಾಗಿ ಹೋಗುವಂತೆ ಕ್ರಮ ಕೈಗೊಳ್ಳಬೇಕು. ಹಳ್ಳಿಗಳಿಗೆ ಬಸ್ಸುಗಳು ಹೋಗದೇ ಇರುವುದನ್ನು ನಾವು ಪ್ರತಿದಿನ ಕಾಣುತ್ತಿದ್ದೇವೆ. ನಾನು ಯಾವಾಗ ಊರಿಗೆ ಹೋದರೂ ಅಲ್ಲಿಯ ಜನರು ಕೇವಲ ಈ ಬಸ್ಸಿನ ಬಗ್ಗೆಯೇ ದೂರುಗಳನ್ನು ಹೆಚ್ಚಿನ ರೀತಿಯಲ್ಲಿ ಹೇಳುತ್ತಿರುವುದರಿಂದ ಈ ಸಮಸ್ಯೆಯನ್ನು ಯಾವ ರೀತಿ ಸರಿಪಡಿಸುತ್ತಾರೆಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೆ, ಗೌರವಾನ್ವಿತ ಮಾನ್ಯ ಸದಸ್ಯರು ಹೇಳಿರುವುದು ವಾಸ್ತವಾಂಶ. ತಮಗೆ ಗೊತ್ತಿರುವಂತೆ ಎಲ್ಲಾ ಕಡೆಗಳಲ್ಲೂ ಬಸ್ಸುಗಳ ಕ್ಯಾನ್ಸಲೇಷನ್ಸ್ ಮತ್ತು ವರ್ಕ್‌ಸ್ಟ್‌ನ ಆಬ್ಸೆಂಟಿಸಮ್ ಜಾಸ್ತಿ ಇರುವುದರಿಂದ, ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ ಸಮಯಕ್ಕೆ ಸರಿಯಾಗಿ ಬಸ್ಸುಗಳು ಓಡುತ್ತಿಲ್ಲ, ಮತ್ತು ಬಸ್ಸುಗಳು ಬರುವುದೇ ಇಲ್ಲವೆಂದು ದೂರುಗಳನ್ನು ಹೇಳುತ್ತಿರುವಂಥಾದ್ದು ನಿಜವಾದ ಸಂಗತಿ. ಇದನ್ನು ಸರಿಪಡಿಸಲು ಅನೇಕ ಕ್ರಮಗಳನ್ನು ನಾನು ತೆಗೆದುಕೊಂಡಿದ್ದೇನೆ. ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆ ಎಂದರೆ, ದಾವಣಗೆರೆಯಲ್ಲಿ ಡಿವಿಜನಲ್ ವರ್ಕ್‌ಷಾಪನ್ನು ಮಾಡುವ ವಿಚಾರದಲ್ಲಿ ಕೇಳಿದ್ದಾರೆ. ತಾ: 7-1-95 ರಲ್ಲಿ ಸರ್ವೆ ನಂ. 215 ರಲ್ಲಿ ದಾವಣಗೆರೆಯ ಆವರಗೆರೆ ಗ್ರಾಮದಲ್ಲಿ 5 ಎಕರೆ ಜಮೀನನ್ನು ಕೆ.ಎಸ್.ಆರ್.ಟಿ.ಸಿ. ಯವರು ತೆಗೆದುಕೊಂಡಿದ್ದಾರೆ. ಸುಮಾರು 95 ಲಕ್ಷದಿಂದ ಒಂದು ಕೋಟಿ ರೂ. ನ ಒಳಗೆ ಅಲ್ಲಿಗೆ ಒಂದು ವರ್ಕ್‌ಶಾಪನ್ನು ಮಂಜೂರು ಮಾಡಿದ್ದೇವೆ 17-7-96 ರಂದು ನಮ್ಮ ಬೋರ್ಡ್ ಮೀಟಿಂಗ್‌ನಲ್ಲಿ ಇದಕ್ಕೆ ಮಂಜೂರಾತಿ ನೀಡಿದ್ದೇವೆ. ತಾ: 18-7-96 ರಂದು ಇದರ ಬಗ್ಗೆ ಟೆಂಡರ್ ಕರೆದಿದ್ದಾರೆ. ಇನ್ನು ಒಂದು ವಾರ ಅಥವಾ ಹದಿನೈದು ದಿನದಲ್ಲಿ ಆ ಟೆಂಡರ್ ಫೈನಲೈಸ್ ಆಗುತ್ತದೆ. ಈ ವರ್ಷ ಕೆಲಸ ಪ್ರಾರಂಭವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್:- ಇನ್ನೊಂದು ವಿಚಾರ ಎಂದರೆ, ದಾವಣಗೆರೆಯಿಂದ 35 ಕಿ.ಮೀ. ದೂರದಲ್ಲಿ ನನ್ನ ಕ್ಷೇತ್ರವಾದ ಮಾಯಕೊಂಡ ಎಂಬ ಒಂದು ಊರು ಇದೆ. ಅಲ್ಲಿಗೆ ಇವತ್ತೂ ಕೂಡ ಕೆ.ಎಸ್.ಆರ್.ಟಿ.ಸಿ. ಬಸ್ ಹೋಗಿಬರುವ ಸಾಧ್ಯತೆ ಇಲ್ಲ. ಅಲ್ಲಿಗೆ ಬೇರೆ ಯಾವುದೇ ಖಾಸಗಿ ಬಸ್ ಕೂಡ ಹೋಗಿಬರುತ್ತಿಲ್ಲ. ಆದ್ದರಿಂದ ನಮ್ಮ ಮಾಯಕೊಂಡ ಎಂಬ ಊರಿಗೆ ಪ್ರತಿದಿನ 2 ಬಸ್ಸುಗಳಾದರೂ ಖಾಯಂ ಆಗಿ ಹೋಗಿಬರುವಂತೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಪ್ರತಿಯೊಂದು ತಾಲ್ಲೂಕಿಗೂ ಡಬಲ್ ಡೋರ್‌ನ ಎರಡೆರಡು ಬಸ್ಸುಗಳನ್ನು ಇನ್ನು ನೂರು ದಿನದೊಳಗೆ ಕೊಡುತ್ತೇವೆಂದು ಹೇಳಿದ್ದೇವೆ. ಆಗ ಇವರ ಸಮಸ್ಯೆಗೆ ಸ್ವಲ್ಪ ಮಟ್ಟಿಗೆ ಪರಿಹಾರ ಸಿಕ್ಕಬಹುದೆಂದು ತಿಳಿದುಕೊಂಡಿದ್ದೇನೆ. ಚಿತ್ರದುರ್ಗ ಜಿಲ್ಲೆ ಸಂಪೂರ್ಣವಾಗಿ ರಾಷ್ಟ್ರೀಕರಣವಾಗಿರತಕ್ಕಂಥ ಜಿಲ್ಲೆ ಅಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಕೇಳಿರುವ ವಿಚಾರದಲ್ಲಿ ಕಾರ್ಯಚರಣೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ:- ಶಿರಸಿಯಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣ

363 (1340) **ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸ್ಥಳವನ್ನು ಯಾವ ವರ್ಷ ಖರೀದಿಸಲಾಗಿದೆ?

ಆ) ಎಷ್ಟು ಹಣಕ್ಕೆ ಖರೀದಿಸಲಾಗಿದೆ?

ಇ) ಕಟ್ಟಡ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಸದರಿ ಉದ್ದೇಶಕ್ಕಾಗಿ ಸರ್ವೆ ಸಂಖ್ಯೆ 15ರಲ್ಲಿನ 5 ಎಕರೆ ಸರ್ಕಾರಿ ನಿವೇಶನವನ್ನು ದಿನಾಂಕ 7-9-1989ರಂದು ಸ್ವಾಧೀನಕ್ಕೆ ಪಡೆಯಲಾಗಿದೆ.

ಆ) ರೂ. 3,26,136.00 ಗಳನ್ನು ನಿವೇಶನದ ಮೌಲ್ಯದ ಬಾಬ್ತು ಪಾವತಿಸಲಾಗಿದೆ.

ಇ) 1996-97ನೇ ಸಾಲಿನ ಆಯವ್ಯಯದಲ್ಲಿ ಇದನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ:- ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿರ್ಸಿ ಅತ್ಯಂತ ಪ್ರಮುಖವಾದ ಕೇಂದ್ರ. ಇಲ್ಲಿ ಬಸ್ ನಿಲ್ದಾಣ ಬಹಳ ಇಕ್ಕಟ್ಟಾಗಿದೆ. ಮಾನ್ಯ ಸಾರಿಗೆ ಸಚಿವರು ಕೂಡ ಈ ಬಸ್ ನಿಲ್ದಾಣವನ್ನು ಪ್ರತ್ಯಕ್ಷವಾಗಿ ನೋಡಿದ್ದಾರೆ. 1989ನೇ ಇಸವಿಯಲ್ಲೇ ಈ ಬಸ್ ನಿಲ್ದಾಣವನ್ನು ಸ್ಥಳಾಂತರಿಸಬೇಕೆಂದು ಇದಕ್ಕೆ ಬೇಕಾದ ಜಮೀನನ್ನು ಖರೀದಿಸಲಾಗಿದೆ. 3,26,136 ರೂ. ಗಳನ್ನು ಕೊಟ್ಟು 5 ಎಕರೆ ಜಾಗವನ್ನು 89ನೇ ಇಸವಿಯಲ್ಲಿ ಏನು ಖರೀದಿ ಮಾಡಿದ್ದಾರೆ, ಆ ಜಾಗದಲ್ಲಿ ಇದುವರೆಗೂ ಬಸ್ ಸ್ಟ್ಯಾಂಡನ್ನು ಕಟ್ಟುವುದಕ್ಕೆ ವಿಳಂಬ ಮಾಡಿರುವುದಕ್ಕೆ ಕಾರಣವೇನು? ಇಷ್ಟು ಇಕ್ಕಟ್ಟಾದ ಬಸ್ ನಿಲ್ದಾಣದಲ್ಲಿ ದಿನಕ್ಕೆ ನೂರಾರು ಬಸ್ಸುಗಳು, ಬೊಂಬಾಯಿಯಿಂದ ಮಂಗಳೂರಿಗೆ ಹೋಗುವುದು ಇರಬಹುದು, ಅಥವಾ ಇಡೀ ಉತ್ತರ ಕರ್ನಾಟಕದ ಭಾಗದಿಂದ ಧರ್ಮಸ್ಥಳಕ್ಕೆ ಅಥವಾ ಇನ್ನೂ ಬೇರೆ ಬೇರೆ ಪುಣ್ಯ ಕ್ಷೇತ್ರ, ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಬೇಕಾದರೆ ಸಿರಸಿಯ ಮುಖಾಂತರವೇ ಹೋಗುತ್ತವೆ. ಇಂಥ ಪ್ರಮುಖವಾದ ಮತ್ತು ಇಕ್ಕಟ್ಟಾದ ಕೇಂದ್ರಕ್ಕೆ 1996-97 ರ ಆಯವ್ಯಯದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ ಏನು? ಆಯ-